# ಕನ್ನಡ ವಿಶ್ವವಿದ್ಯಾಲಯ, ಹಂಪಿ
## ಭಾಷಾಂತರ ಅಧ್ಯಯನ ವಿಭಾಗ

### ‘ಯಕ್ಷಗಾನ ಅರ್ಥಗಾರಿಕೆ’ ಸಂವಾದ ಕಾರ್ಯಕ್ರಮ –09.01.2025

‘ಪುರಾಣದ ಮರುನಿರೂಪಣೆಗಳಾಗಿ ಯಕ್ಷಗಾನ ಪ್ರಸಂಗಗಳು ಬೆಳೆದುಬಂದಿವೆ’ ಎಂದು ಹಿರಿಯ ಯಕ್ಷಗಾನದ ಕಲಾವಿದರಾದ **ತಾರನಾಥ ವರ್ಕಾಡಿ** ಅವರು ಹೇಳಿದರು.



ಹಂಪಿ ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ಅಧ್ಯಯನ ವಿಭಾಗದಲ್ಲಿ ದಿನಾಂಕ 09.01.2025 ಗುರುವಾರದಂದು **‘ಯಕ್ಷಗಾನ ಅರ್ಥಗಾರಿಕೆ’** ವಿಷಯದಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮುಂದುವರೆದು ಯಕ್ಷಗಾನವು ಸಂಪೂರ್ಣವಾಗಿ ಪುರಾಣಗಳ ಹಿನ್ನೆಲೆಯಲ್ಲಿ ರಚಿತವಾಗಿದ್ದರೂ ಸಮಕಾಲೀನ ವಸ್ತುವನ್ನು ಅಳವಡಿಸಿಕೊಂಡ ಚಲನಶೀಲ ಕಲೆಯಾಗಿದೆ. ಮನರಂಜನೆಯ ಮೂಲ ಉದ್ದೇಶವನ್ನು ಹೊಂದಿದ್ದು ಸೃಜನಶೀಲ ಕಲಾವಿದರಿಗೆ ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ಕಲ್ಪಿಸುತ್ತದೆ. ಈ ಉಪನ್ಯಾಸದ ಜೊತೆಗೆ ಸಂಶೋಧನಾರ್ಥಿಗಳು ವಾಚಿಸಿದ ಕಾವ್ಯಗಳ ಕೆಲವು ಪ್ರಸಂಗಗಳನ್ನು ಯಕ್ಷಗಾನದ ಅರ್ಥಗಾರಿಕೆ ಹಿನ್ನೆಲೆಯಲ್ಲಿ ಅವರು ಪ್ರಸ್ತುತಪಡಿಸಿದರು.

ಈ ಸಂವಾದ ಕಾರ್ಯಕ್ರಮವು ವಿಭಾಗದ ಮುಖ್ಯಸ್ಥರಾದ ಡಾ. ಎ. ಮೋಹನ ಕುಂಟಾರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಪ್ರೊ. ಸಿ. ವೆಂಕಟೇಶ, ಮತ್ತು ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾದ ಡಾ. ಯರ್ರಿಸ್ವಾಮಿ ಮತ್ತು ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಪ್ರಾಧ್ಯಪಕರಾದ ಡಾ. ವೆಂಕಟಗಿರಿ ದಳವಾಯಿ ಹಾಗೂ ವಿಶ್ವವಿದ್ಯಾಲಯದ ಸಂಶೋಧನಾರ್ಥಿಗಳು ಸಂವಾದದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಬೇರ್ಗಿ ಜಯಶ್ರೀ ಅವರು ನಿರೂಪಿಸಿದರು ಮತ್ತು ವಿನೀತಾ ಜೆ. ಎಂ. ಅವರು ವಂದಿಸಿದರು.